# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 212 |
| ಸದಸ್ಯರ ಹೆಸರು | : | ಶ್ರೀ ಭೀಮರಾವ್ ಬಸವರಾಜ ಪಾಟೀಲ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 06-12-2023 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ.ಸ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಬೀದರ್‌ದಿಂದ ಶ್ರೀರಂಗಪಟ್ಟಣ ರಾಜ್ಯ ಹೆದ್ದಾರಿ ತುಂಬಾ ಹದಗೆಟ್ಟಿದ್ದು, ಇದರಿಂದ ಕಲ್ಯಾಣ ಕರ್ನಾಟಕದ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು; | ಬೀದರ್‌ನಿಂದ ಶ್ರೀರಂಗಪಟ್ಟಣ ರಾಜ್ಯ ಹೆದ್ದಾರಿಯನ್ನು ದಿನಾಂಕ:04.03.2014 ರಲ್ಲಿ ರಾಷ್ಟ್ರೀಯ ಹೆದ್ದಾರಿ-150ಎ ಎಂದು ಘೋಷಿಸಿ ಅಧಿಸೂಚಿಸಲಾಗಿರುತ್ತದೆ ಹಾಗೂ ಸದರಿ ರಸ್ತೆಯ ಆಯ್ದ ಭಾಗಗಳು ಹದಗೆಟ್ಟಿದ್ದು, ಇದರಿಂದ ಕಲ್ಯಾಣ ಕರ್ನಾಟಕದ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ರಾಷ್ಟ್ರೀಯ ಹೆದ್ದಾರಿ-150ಎ ರಲ್ಲಿ ರಾಷ್ಟ್ರೀಯ ಹೆದ್ದಾರಿ ವಲಯ ಹಾಗೂ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| ಆ | ಸದರಿ ರಾಜ್ಯ ಹೆದ್ದಾರಿಯನ್ನು ಮೇಲ್ದರ್ಜೆಗೇರಿಸಲು ಪ್ರಸ್ತಾವನೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು? | |

ಸಂಖ್ಯೆ: ಲೋಇ 235 ಸಿಎನ್‌ಹೆಚ್ 2023 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

ಅನುಬಂಧ

ಮಾನ್ಯ ವಿಧಾನ ಪರಿಷತ್ ಸದಸ್ಯರಾದ **ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** ರವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:212

**ಅನುಬಂಧ-1**

**ಬೀದರ್‌ನಿಂದ ಶ್ರೀರಂಗಪಟ್ಟಣ ರಾಷ್ಟ್ರೀಯ ಹೆದ್ದಾರಿ-150ಎ ರಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರಗಳು**

| ಕ್ರ. ಸಂ | ಕಿ.ಮೀ ರಿಂದ | ಕಿ.ಮೀ ರವರೆಗೆ | ಒಟ್ಟು ಉದ್ದ ಕಿ.ಮೀ ಗಳಲ್ಲಿ | ವಿವರಣೆ |
|---|---|---|---|---|
| 1 | 0.00 | 50.00 | 50.00 | ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುತ್ತದೆ. ರಾಷ್ಟ್ರೀಯ ಹೆದ್ದಾರಿ-150ಎ ಜೇವರ್ಗಿಯಿಂದ ಶಹಾಪೂರ್ (ಹತ್ತಿಗೂಡೂರು) ವರೆಗಿನ ರಸ್ತೆಗೆ ನಾಲ್ಕು ಪಥದ ರಸ್ತೆಯನ್ನು ಮಾಡಲು ವಿಸ್ತೃತ ಯೋಜನಾ ವರದಿ ತಯಾರಿಸುವ ಹಂತದಲ್ಲಿರುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರವರು ವರದಿಸಿರುತ್ತಾರೆ. |
| 2 | 50.00 | 89.30 | 39.30 | ಸದರಿ ರಸ್ತೆಯು Intermediate Lane ಆಗಿದ್ದು, ಸದರಿ ರಸ್ತೆಯ ನಿಯತಕಾಲಿಕ ನವೀಕರಣ ಕಾಮಗಾರಿಯನ್ನು ದಿನಾಂಕ: 30.04.2022 ರಂದು ಮುಕ್ತಾಯಗೊಂಡಿರುತ್ತದೆ ಮತ್ತು ಸದರಿ ಕಾಮಗಾರಿಯ DLP ಅವಧಿಯನ್ನು 30.04.2025 ರ ವರೆಗೆ ಇರುತ್ತದೆ |
| 3 | 89.30 | 113.00 | 23.70 | ನಿಯತಕಾಲಿಕ ನವೀಕರಣ ಕಾಮಗಾರಿ ಮುಕ್ತಾಯಗೊಂಡಿದ್ದು . DLP 31.03.2024 ರ ವರೆಗೆ ಇರುತ್ತದೆ. ಮುದುವರೆದು 2024-25 ನೇ ಸಾಲಿನ ವಾರ್ಷಿಕ ಕ್ರಿಯಾಯೋಜನೆಯಡಿ ವಿಸ್ತೂತ್ರ ಯೋಜನಾವರದಿ ತಯಾರಿಸಲು ಭೂ-ಸಾರಿಗೆ ಮಂತ್ರಾಲಯ ನವದೆಹಲಿ ಇವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. |
| 4 | 112.75 | 142.00 | 29.25 | ಅಗಲೀಕರಣ ಕಾಮಗಾರಿ 60% ಭೌತಿಕವಾಗಿ ಮುಕ್ತಾಯಗೊಂಡಿದೆ (ಕಿಮಿ 147.070 ರಿಂದ ಕಿ ಮಿ 149.070 ವರೆಗಿನ ಅಗಲಿಕರಣವು ಈ ಕಾಮಗಾರಿಯ ಭಾಗವಾಗಿರುತ್ತದೆ.) |
| 5 | 142.00 | 171.60 | 29.60 | ನಿಯತಕಾಲಿಕ ನವೀಕರಣ ಕಾಮಗಾರಿ ಮುಕ್ತಾಯಗೊಂಡಿದ್ದು . DLP 31.03.2024 ರ ವರೆಗೆ ಇರುತ್ತದೆ. |
| 6 | 171.60 | 172.30 | 0.70 | ಬೃಹತ್ ಸೇತುವೆ ಅಗಲೀಕರಣ ಕಾಮಗಾರಿಯು ಶೇ 92.1% ರಷ್ಟು ಭೌತಿಕವಾಗಿ ಮುಕಾಯಗೊಂಡಿರುತ್ತದೆ. |
| 7 | 171.60 | 173.95 | 2.35 | ಸಿಂಧನೂರು ನಗರ ವ್ಯಾಪ್ತಿಯಲ್ಲಿ ಅಭಿವೃದ್ಧಿಪಡಿಸುವ ಕಾಮಗಾರಿ ಸಿಂಧನೂರು ನಗರ ವ್ಯಾಪ್ತಿಯಲ್ಲಿ 6 6ಲೇನ್ ಕಾಂಕ್ರೀಟ್ ರಸ್ತೆಯಲ್ಲಿ ಯಾವುದೇ ಹಾನಿಯಾಗಿರುವುದಿಲ್ಲ. |
| 8 | 178.682 | 184.70 | 6.02 | |
| 9 | 184.70 | 198.90 | 14.20 | ಅಭಿವೃದ್ಧಿ ಪಡಿಸುವ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಮುಕ್ತಾಯಗೊಂಡಿದ್ದು, ಕೇಂದ್ರ ಭೂಸಾರಿಗೆ ಮಂತ್ರಾಲಯ ಇವರಿಂದ ಗುತ್ತಿಗೆದಾರರನ್ನು ನಿಯುಕ್ತಿಗೊಳಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ. |
| 10 | 198.90 | 199.20 | 0.30 | ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುತ್ತದೆ. |
| 11 | 199.200 | 214.880 | 15.68 | ರಾಷ್ಟ್ರೀಯ ಹೆದ್ದಾರಿ-150ಎ ರ ಸರಪಳಿ 199.20 ಕಿ.ಮೀ ಯಿಂದ 214.880 ಕಿಮೀ ವರೆಗೆ (ಇಬ್ರಾಹಿಂಪುರ – ತೆಕ್ಕಲಕೋಟೆ ವರೆಗಿನ) ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಮೆ॥ ಆರ್.ಎಂ.ಎನ್ ಇನ್ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್, ಹೈದಾರಬಾದ್‌ರವರಿಗೆ ವಹಿಸಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |

| | | | | |
|---|---|---|---|---|
| | | | | ಸದರಿ ಕಾಮಗಾರಿಯನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಲು ಕ್ರಮವಹಿಸಲಾಗಿರುತ್ತದೆ. |
| 12 | 214.880 | 235.000 | 20.12 | ರಾಷ್ಟ್ರೀಯ ಹೆದ್ದಾರಿ-150ಎ ರ ಸರಪಳಿ 214.880 ಕಿ.ಮೀ ಯಿಂದ 235.00 ಕಿಮೀವರೆಗೆ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಮೇ॥ ಪಿ. ಪ್ರಭಾಕರ್ ರೆಡ್ಡಿರವರಿಗೆ ವಹಿಸಲಾಗಿದ್ದು, ಕಾಮಗಾರಿಯು ಮುಕ್ತಾಯಗೊಂಡಿದ್ದು, ಮತ್ತು ಸದರಿ ಕಾಮಗಾರಿಯು ಡಿ.ಎಲ್.ಪಿ ಅವಧಿಯಲ್ಲಿರುತ್ತದೆ. |
| 13 | 235.000 | 254.800 | 19.8 | ರಾಷ್ಟ್ರೀಯ ಹೆದ್ದಾರಿ-150ಎ ರ ಸರಪಳಿ 235.00 ಕಿ.ಮೀ ಯಿಂದ 254.800 ಕಿಮೀ (ಸಿಂದಗಿರಿ - ಬಳ್ಳಾರಿ)ವರೆಗೆ ಕಾಮಗಾರಿಯನ್ನು ಕೈಗೆತ್ತಿಗೊಳ್ಳುವ ಉದ್ದೇಶದಿಂದ ಸಕ್ಷಮ ಪ್ರಾಧಿಕಾರದಿಂದ ಟೆಂಡರ್ ಕರೆಯಲಾಗಿದ್ದು, 7 ಜನ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲಾಗಿದ್ದು, ಈ ಪೈಕಿ ಟೆಂಡರ್ ಕುರಿತಂತೆ ಗುತ್ತಿಗೆದಾರರಾದ ಮೇ॥ ಎಂ.ಎಸ್.ಜಿ ಕನ್‌ಸ್ಟ್ರಕ್ಷನ್‌ರವರು ಉಚ್ಚನ್ಯಾಯಾಲಯಕ್ಕೆ ದಾವೆ ಹೂಡಿರುತ್ತಾರೆ. ಉಚ್ಚನ್ಯಾಯಾಲಯವು ಸದರಿ ಪ್ರಕರಣವು ದಿನಾಂಕ:24-12-2023ಕ್ಕೆ ಮುಂದುಡಲಾಗಿರುತ್ತದೆ.<br>ಸದರಿ ಸರಪಳಿಯಲ್ಲಿ ಸಾರ್ವಜನಿಕರು ಸಂಚಾರ ಮಾಡಲು ತೊಂದರೆ ಉಂಟಾಗದಂತೆ ಗುಂಡಿ ಮುಚ್ಚಲು ಎಸ್.ಟಿ.ಎಂ.ಸಿ ಯೋಜನೆಯಡಿಯಲ್ಲಿ ಅಲ್ಪಾವಧಿ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |
| 14 | 254.800 | 410.600 | 155.8 | ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುತ್ತದೆ. |
| 15 | 410.600 | 413.740 | 3.14 | ರಾಷ್ಟ್ರೀಯ ಹೆದ್ದಾರಿ-150ಎ ರ ಸರಪಳಿ 410.600 ಕಿ.ಮೀ ಯಿಂದ 413.740 ಕಿಮೀ ವರೆಗೆ (ಹಿರಿಯೂರು – ಹುಳಿಯಾರ ವರೆಗಿನ) ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಶ್ರೀ ಎಲ್. ಕಾಶಿರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು, ದಾವಣಗೆರೆರವರಿಗೆ ವಹಿಸಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br>ಸದರಿ ಕಾಮಗಾರಿಯನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಲು ಕ್ರಮವಹಿಸಲಾಗಿರುತ್ತದೆ. |
| 16 | 413.740 | 441.860 | 28.12 | ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುತ್ತದೆ. |
| 17 | 441.860 | 492.216 | 50.356 | ರಾಷ್ಟ್ರೀಯ ಹೆದ್ದಾರಿ-150ಎ ಕಿ.ಮಿ 441.86 ರಿಂದ ಕಿ.ಮಿ 492.216 ರವರೆಗೆ ಇರುವ ಉದ್ದರಸ್ತೆಯನ್ನು ದ್ವಿಪಥ ಪೇವ್ಡ್ ಶೋಲ್ಡರ್ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಚತುಷ್ಪಥದ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸುವ ಕಾಮಗಾರಿಯು ಮುಕ್ತಾಯದ ಹಂತದಲ್ಲಿದೆ. |
| 18 | 492.216 | 534.476 | 42.260 | ರಾಷ್ಟ್ರೀಯ ಹೆದ್ದಾರಿ-150ಎ ಕಿ.ಮಿ 492.216 ರಿಂದ ಕಿ.ಮಿ 534.476 ರವರೆಗೆ ಇರುವ ಉದ್ದದ ರಸ್ತೆಯನ್ನು ದ್ವಿಪಥ ಪೇವ್ಡ್ ಶೋಲ್ಡರ್ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಚತುಷ್ಪಥದ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸುವ ಕಾಮಗಾರಿಯು ಕೇಂದ್ರ ಸರ್ಕಾರದ ವಾರ್ಷಿಕ ಯೋಜನೆಯಲ್ಲಿ ಮಂಜೂರಾಗಿದ್ದು ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಕಾಮಗಾರಿಯನ್ನು ಶೀಘ್ರದಲ್ಲಿ ಪ್ರಾರಂಭಿಸಲಾಗುವುದು. |
| 19 | 534.476 | 544.200 | 9.724 | ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುತ್ತದೆ. |

| | | | | |
|---|---|---|---|---|
| 20 | 544.200 | 597.560 | 53.36 | ರಾಷ್ಟ್ರೀಯ ಹೆದ್ದಾರಿ-150ಎ ಕಿಮಿ 544.200ರಿಂದ ಕಿಮಿ 597.560 ವರೆಗಿನ ಒಟ್ಟು 53.360ಕಿಮಿ ಉದ್ದದ ರಸ್ತೆಯು ಹಾದು ಹೋಗುತ್ತಿದ್ದು ಅದರಲ್ಲಿ 50.00 ಕಿಮಿ ಉದ್ದರಸ್ತೆಯನ್ನು ದ್ವಿಪಥ ಪೇವ್ಡ್ ಶೋಲ್ಡರ್ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಚತುಷ್ಪಥದ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸಲಾಗಿದೆ. ಮುಂದುವರೆದು, ಸದರಿ ಕಾಮಗಾರಿಯಲ್ಲಿ ಬರುವ ಭಾರಿ ಸೇತುವೆಯ ಕಾಮಗಾರಿಯು ಪೂರ್ಣಗೊಂಡಿದ್ದು, ಅಪ್ರೋಚ್ ರಸ್ತೆಯ ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದ್ದು, ಕಾಮಗಾರಿಯು ಪ್ರಗತಿಯಲ್ಲಿದೆ. |
| 21 | 597.560 | 606.670 | 9.11 | ರಾಷ್ಟ್ರೀಯ ಹೆದ್ದಾರಿ-150ಎ ಕಿಮೀ. 597.560 ಯಿಂದ 606.670 ರವರೆಗೆ ದ್ವಿಪಥ ಪೇವ್ಡ್ ಶೋಲ್ಡರ್ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸುವ ಕಾಮಗಾರಿಯ ಅಂದಾಜು ಪಟ್ಟಿ ರೂ. 43.27 ಕೋಟಿಗಳಿಗೆ ಅನುಮೋದನೆಗಾಗಿ ಕೇಂದ್ರ ಭೂ ಸಾರಿಗೆ ಮಂತ್ರಾಲಯದ ಪ್ರಾದೇಶಿಕ ಕಛೇರಿಗೆ ಸಲ್ಲಿಸಲಾಗಿದೆ. ಅನುಮೋದನೆದೊರತ ನಂತರ ಕಾಮಗಾರಿಯನ್ನು ಶೀಘ್ರದಲ್ಲಿ ಪ್ರಾರಂಭಿಸಲಾಗುವುದು. |
| 22 | 606.670 | 684.240 | 77.57 | ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುತ್ತದೆ. |